**ಇಂದು ದಿನಾಂಕ*:20.12.2024* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಐ.ಆರ್.ಎಸ್.ವಕೀಲರಿಂದಃ**

ನಮ್ಮ ಜಮೀನಿಗೆ ಗೊತ್ತಿಲ್ಲದಂತೆ ಡಿಕ್ರಿ ಪಡೆದುಕೊಂಡಿರುವುದರಿಂದ ಈ ಕೇಸನ್ನು ನಮ್ಮ ತಂದೆ ಹಾಕಿದ್ದಾರೆ. ನನ್ನ ತಂದೆಗೆ ಈಗ 65 ವರ್ಷ. ನಮ್ಮ ತಂದೆ ಆರೋಗ್ಯವಾಗಿ ಇದ್ದು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಅವರಿಗೆ ಕಣ್ಣು ಕಾಣುವುದಿಲ್ಲ ಮತ್ತು ಸ್ವಲ್ಪ ಕಿವಿ ಕೇಳಿಸುವುದಿಲ್ಲ. ಆ ಬಗ್ಗೆ ನ್ಯಾಯಾಲಯಕ್ಕೆ ವೈದ್ಯಕೀಯ ದಾಖಲೆಗಳನ್ನು ಹಾಜರು ಪಡಿಸಿಲ್ಲ. ಈ ಕೇಸು ದಾಖಲಿಸಿದ 2 ವರ್ಷದ ವರೆಗೂ ನಮ್ಮ ತಂದೆಯೇ ನ್ಯಾಯಾಲಯಕ್ಕೆ ಬರುತ್ತಿದ್ದರು ಎಂದರೆ ಸರಿ. ನನ್ನ ತಂದೆ ನ್ಯಾಯಾಲಯಕ್ಕೆ ಬಂದರೆ ಸತ್ಯಂಶ ಗೊತ್ತಾಗುತ್ತದೆ ಎಂಬ ಕಾರಣಕ್ಕೆ ಅವರನ್ನು ಮನೆಯಲ್ಲಿಯೇ ಇರಿಸಿ ನಾನು ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಆರೋಗ್ಯವಾಗಿ ಇದ್ದು ಅವರೇ ಎಲ್ಲಾ ವ್ಯವಸಾಯದ ಕೆಲಸಗಳನ್ನು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ಪವರ್ ಆಫ್ ಅಟಾರ್ನಿ ಅನ್ನು ಶ್ರೀ.ಗಣೇಶ ವಕೀಲರ ಕಚೇರಿಯಲ್ಲಿ ಮಾಡಿಸಿದ್ದೇನೆ. ನನ್ನ ತಂದೆ ಮೂಲತಃ ಕೆ.ಆರ್.ನಗರ ತಾಲ್ಲೂಕಿನ ಬಂಡಹಳ್ಳಿಯವರು. ನನ್ನ ತಾಯಿ ಮಾಗಳ್ಳಿ ಗ್ರಾಮದವರು. ನನ್ನ ಚಿಕ್ಕಪ್ಪನ ಮಗ ಮಹೇಂದ್ರ ಗೊತ್ತಿದ್ದೆ. ನಾನು ಎಸ್.ಎಸ್.ಎಲ್.ಸಿ. ಓದಿದ್ದೇನೆ. ನನ್ನ ತಂದೆ ಏನು ವ್ಯವಹಾರ ಮಾಡಿದ್ದಾರೆ ಅಂತ ತಿಳಿದುಕೊಂಡಿದ್ದೇನೆ. ಪ್ರತಿವಾದಿಗಳನ್ನು ನಾನು ನೋಡಿಲ್ಲ. ವಾದ ಪತ್ರದಲ್ಲಿ ಇರುವ ವಿಷಯಗಳನ್ನು ನನ್ನ ತಂದೆ ಹೇಳಿದ್ದಾರೆ. ಪ್ರತಿವಾದಿಗಳ ವಿಳಾಸವನ್ನು ನಮ್ಮ ತಂದೆ ಹೇಳಿರುತ್ತಾರೆ. ದಾವಾ ಆಸ್ತಿಯ ಮೂಲಕ ದಾಖಲೆಗಳನ್ನು ಬಗ್ಗೆ ತಿಳಿದುಕೊಂಡಿದ್ದೇನೆ. ದಾವಾ ಆಸ್ತಿ 1951 ರಲ್ಲಿ ಪ್ರತಿವಾದಿ ತಂದೆ ಕರಿಯುಪ್ಪನವರಿಗೆ ಮಂಜೂರಾಗಿತ್ತು ಎಂದರೆ ಸುಳ್ಳು. ಪ್ರತಿವಾದಿಗಳ ತಂದೆ ಮೂಲತಃ ಮಾಗಳಿ ಗ್ರಾಮಕ್ಕೆ ಸೇರಿದವರು ಎಂದರೆ ಗೊತ್ತಿಲ್ಲ. ದಾವಾ ಆಸ್ತಿ ಮಂಜುರು ಆದ ನಂತರ ಪ್ರತಿ ವಾದಿಗಳ ತಂದೆ ಸುಪರ್ದಿಗೆ ತೆಗೆದುಕೊಂಡು ವ್ಯಾವಸಾಯ ಮಾಡಿಕೊಂಡು ಬರುತ್ತಿದ್ದರು ಎಂದರೆ ಸುಳ್ಳು. ನನ್ನ ತಂದೆ ಬಂಡಹಳ್ಳಿಯಿಂದ ಮಾಗಳಿ ಗ್ರಾಮಕ್ಕೆ ಬಂದು ಸುಮಾರು 40 ವರ್ಷಕಿಂತ ಹೆಚ್ಚಗಿದೆ. ಆ ಬಗ್ಗೆ ಆಧಾರ್ ಕಾರ್ಡ್, ವೋಟರ್ ಐಡಿ ಇದೆ.

ನನ್ನ ತಂದೆ ವಿದ್ಯಾಭ್ಯಾಸ ಮಾಡಿಲ್ಲ. ದಾವಾ ಆಸ್ತಿಯ ಚೆಕ್ಕುಬಂದಿ ಗೊತ್ತಿದ್ದೆ. ದಾವಾ ಸರ್ವೆ ನಂ.39 ಕ್ಕೆ ಪೂರ್ವಕ್ಕೆ-ರಸ್ತೆ, ಪಶ್ಚಿಮಕ್ಕೆ-ಸರ್ಕಾರಿ ಕಟ್ಟೆ ಉತ್ತರಕ್ಕೆ-ತಾಯಮ್ಮ ಮತ್ತು ಮಲ್ಲೇಗೌಡ, ದಕ್ಷಿಣಕ್ಕೆ-ಮಣಿಕುಮಾರ್ ಮತ್ತು ಮಹೇಶ್. ದಾವಾ ಸರ್ವೆ ನಂ.35 ಕ್ಕೆ ಚೆಕ್ಕುಬಂದಿ ಏನು ಎಂದರೆ ಸರ್ವೆ ನಂ.39 ಮತ್ತು 35 ಕ್ಕೆ ಒಂದೇ ಚೆಕ್ಕುಬಂದಿ. ದಾವಾ ಆಸ್ತಿಗಳನ್ನು ನಮ್ಮ ತಂದೆಗೆ ಸರ್ಕಾರದಿಂದ ದಿನಾಂಕಃ 01-02-2003 ರಂದು ಸಾಗುವಳಿ ಚೀಟಿ ಮೂಲಕ ಕೊಟ್ಟಿದ್ದಾರೆ. ಸಾಗುವಳಿ ಚೀಟಿ ಕೊಡುವಾಗ ಸ್ಕೆಚ್ ಆಗಿದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಅದನ್ನು ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ದಾವಾ ಸರ್ವೆ ನಂ.39 ರಲ್ಲಿ ಒಟ್ಟು 14 ಎಕರೆ 25 ಗುಂಟೆ ಇದೆ. ಸರ್ವೆ ನಂ.35 ರಲ್ಲಿ ಒಟ್ಟು 10 ಎಕರೆ 25 ಗುಂಟೆ ಇದೆ. ದಾವಾ ಸರ್ವೆ ನಂಬರಿ ದುರಸ್ತು ಆಗಿಲ್ಲ ಎಂದರೆ ಸರಿ. ಒಟ್ಟು 14 ಎಕರೆ 25 ಗುಂಟೆ ಇರುವುದರಿಂದ ಯಾರು ಯಾರು ಎಲ್ಲಿ ಎಲ್ಲಿ ಸ್ವಾಧೀನ ಇದ್ದಾರೆ ಅಂತ ಹೇಳಲು ಸಾಧ್ಯವಿಲ್ಲ ಎಂದರೆ ಸರಿ. ದಾವಾ ಆಸ್ತಿಗಳ ಖಾತೆ ದಿನಾಂಕಃ 20-05-2005 ರಿಂದ 2018 ರವರೆಗೂ ಪ್ರತಿವಾದಿಗಳ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲದಂತೆ ಸೃಷ್ಟಿ ಮಾಡಿಕೊಂಡಿದ್ದರು. 1 ನೇ ಪ್ರತಿವಾದಿ ಹೆಸರಿಗೆ ಎಂ.ಆರ್.ನಂ.34/2004-2005 ರಂತೆ ಖಾತೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲದಂತೆ ಮಾಡಿಕೊಂಡಿದ್ದರು. ದಾವಾ ಆಸ್ತಿಗಳು 1 ನೇ ಪ್ರತಿವಾದಿಗೆ ಸೇರಿದೆ ಅದನ್ನು ನಮ್ಮ ತಂದೆ ಅಕ್ರಮವಾಗಿ ಸಾಗುವಳಿ ಮಾಡಿಸಿಕೊಂಡಿದ್ದರು ಎಂದರೆ ಸುಳ್ಳು. ದಾವಾ ಆಸ್ತಿಗೆ ಸಂಬಂಧಿಸಿದಂತೆ ನನ್ನ ತಂದೆ ಅಕ್ರಮವಾಗಿ ಸಾಗುವಳಿ ಮಾಡಿಸಿಕೊಂಡಿರುವ ಕಾರಣ ಗ್ರಾಮದಲ್ಲಿ ಪಂಚಾಯ್ತಿ ಮಾಡಿ ಪಂಚಾಯ್ತಿ ತೀರ್ಮಾನದಂತೆ ನಮ್ಮ ತಂದೆ 1 ನೇ ಪ್ರತಿವಾದಿಗೆ ಖಾತೆ ಮಾಡಿಕೊಡಲು ಒಪ್ಪಿಕೊಂಡು ಅದರಂತೆ ಪಂಚಾಯ್ತಿಗೆ ಪತ್ರ ಬರೆದುಕೊಟ್ಟು ಖಾತೆ ಮಾಡಿಸಿಕೊಟ್ಟಿದ್ದಾರೆ ಎಂದರೆ ಸುಳ್ಳು. ಅದರಂತೆ ಪ್ರತಿವಾದಿ ಖಾತೆ ಮಾಡಿಸಿಕೊಂಡು ಕಂದಾಯ ಪಾವತಿಸುತ್ತಾ ಇದುವರೆಗೂ ಅವರೇ ಸ್ವಾಧೀನ ಇದ್ದಾರೆ ಎಂದರೆ ಸುಳ್ಳು. 1 ನೇ ಪ್ರತಿವಾದಿ ತನ್ನ ತಾಯಿ, ಸಹೋದರ ಸಹೋದರಿಯರ ನಡುವೆ ದಾವೆ ಸಲ್ಲಿಸಿರುವುದು ಗೊತ್ತು. ಆ ದಾವಾ ಸಂಖ್ಯೆ- ಓ.ಎಸ್.246/2008 ಎಂದರೆ ಗೊತ್ತಿಲ್ಲ.

***ಓಎಸ್. ನಂ.50/2022***
***ಪಿಡಬ್ಲೂ:01***

ಸದರಿ ದಾವೆ ವಜಾ ಆದ ನಂತರ ಹುಣಸೂರಿನ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಆರ್.ಎ.48/2013 ರಂತೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಆರ್.ಎ.48/2013 ರಲ್ಲಿ 1 ನೇ ಪ್ರತಿವಾದಿ ಮತ್ತು ಅವರ ಅಣ್ಣ ತಮ್ಮಂದಿರು ರಾಜಿ ಮಾಡಿಕೊಂಡ ಮೇರೆಗೆ ದಾವಾ ಆಸ್ತಿಗಳು ಮತ್ತು ಇತರೆ ಆಸ್ತಿಗಳು 1 ನೇ ಪ್ರತಿವಾದಿಯ ಹಿಸ್ಸೆಗೆ ಬಂದಿದೆ ಎಂದರೆ ಗೊತ್ತಿಲ್ಲ. ಆರ್.ಎ.48/2013 ರಲ್ಲಿನ ತೀರ್ಪಿನ ಪ್ರಕಾರ 1 ನೇ ಪ್ರತಿವಾದಿ ದಾವಾ ಆಸ್ತಿಗಳ ಮಾಲೀಕರಾಗಿ ಖಾತೆ ಮಾಡಿಸಿಕೊಂಡು ಸ್ವಾಧೀನ ಇದ್ದಾರೆ ಎಂದರೆ ಸರಿಯಲ್ಲ. ಅನ್ಯತಾ ಫೈದೆ ಹೊಂದು ನಾನು ಮತ್ತು ನನ್ನ ತಂದೆ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಕೇಸು ಹಾಕಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು 1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿಯಾಗಿದ್ದು ಅದರ ಬಗ್ಗೆ ನನ್ನ ತಂದೆ ಬರೆದುಕೊಟ್ಟಿರುವ ವಿಷಯ ಗೊತ್ತಿದ್ದರು ಸಹಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಮತ್ತು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ತೊಂದರೆ ಕೊಡಬೇಕೆಂದು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**